ಶ್ರೀ ಎಸ್. ಆರ್. ಕಂಠಿ.—ಭಾರತ ಸರ್ಕಾರದವರ ಪರಿಶೀಲನೆಯಲ್ಲಿ ಇದೆ. ಮುಂದೆ ಚ್ಯೆಂ ಕಳೆಯುವುದು ಬೇಡ ಎಂದು ಹೇಳಿ ಟೆಂಡರ್ ಕರೆಯಲಾಗಿದೆ.

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ಈಗ ಕರೆದಿರುವ ಟೆಂಡರ್‌ನಲ್ಲಿ ನ್ಯೂನತೆ ಇದ್ದು ಸರ್ಕಾರಕ್ಕೆ ಹೆಚ್ಚು ನಷ್ಟವಾಗುವುದಾದರೆ ಮತ್ತೆ ಪುನಃ ಪ್ರತ್ಯೇಕ ಪ್ರತ್ಯೇಕವಾಗಿ ಟೆಂಡರ್ ಕರೆಯುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎಸ್. ಆರ್. ಕಂಠಿ.—ನಮಗೆ ಅಷ್ಟು ಸ್ವಾತಂತ್ರ್ಯ ಇಲ್ಲ. ಇಂಡಿಯಾ ಸರ್ಕಾರದವರು ಸೂಚನೆ ಕೊಡುತ್ತಾರೆ. ಅವರ ಸೂಚನೆ ಪ್ರಕಾರ ಟೆಂಡರ್ ಕರೆಯುತ್ತಾ ಇದ್ದೇವೆ. 3 ಗುಂಪುಗಳಾಗಿ ಕರೆಯಿರಿ ಎಂದು ಹೇಳಿದರು, ಅದರಂತೆ ಕರೆದಿದ್ದೇವೆ. ಇನ್ನೂ ಕೆಲವು ಟೆಕ್ನಿಕಲ್‌ಡಿಫಿಕಲ್ಟೀಸ್ ಇರುವುದರಿಂದ ಫೈನಲೈಸ್ ಆಗಿಲ್ಲ.

ಶ್ರೀ ಜಿ. ರಾಮೇಗೌಡ.—ಈ ಕಟ್ಟಡಗಳ ಅಂದಾಜನ್ನು ಮೈಸೂರು ಪಿ.ಡಬ್ಲ್ಯೂ.ಡಿ. ಅವರು ತಯಾರು ಮಾಡಿದ್ದಾರೆಯೇ ಅಥವಾ ಸೆಂಟ್ರಲ್ ಪಿ.ಡಬ್ಲ್ಯೂ.ಡಿ. ಅವರು ತಯಾರು ಮಾಡಿದ್ದಾರೆಯೇ?

ಶ್ರೀ ಎಸ್. ಆರ್. ಕಂಠಿ —ಮೈಸೂರು ಪಿ. ಡಬ್ಲ್ಯೂ. ಡಿ ಅವರು ತಯಾರು ಮಾಡಿದ್ದಾರೆ. ನಾವು ತಯಾರು ಮಾಡುತ್ತೇವೆ ಅವರು ತಯಾರು ಮಾಡುತ್ತಾರೆ ಎಂದು ಇದರಲ್ಲಿ ಹೇಳುವಂತಹದೇನೂ ಇಲ್ಲ. ಎಷ್ಟೋ ಸಲ ನಮ್ಮವರು ಅವರ ಹತ್ತಿರ ಹೋಗಿ ವಿಚಾರ ಮಾಡಿಕೊಂಡು ಬರುತ್ತಾರೆ, ಅವರು ನಮ್ಮವರ ಜೊತೆಯಲ್ಲಿ ಕುಳಿತುಕೊಂಡು ವಿಚಾರ ಮಾಡುತ್ತಾರೆ. ಈ ರೀತಿಯಿಂದ'ಕೆಲಸ ನಡೆದಿದೆ.

ಶ್ರೀ ಬಿ. ಕೆ. ಪುಟ್ಟಯ್ಯ.—ಈ ಕಟ್ಟಡಗಳಿಗೆ ವೆಚ್ಚ ಎಷ್ಟಾಗುತ್ತದೆ ?

ಶ್ರೀ ಎಸ್. ಆರ್. ಕಂಠಿ.—45 ಲಕ್ಷ ರೂಪಾಯಿ.

ಶ್ರೀ ಕೆ. ಪಿ. ರೇವಣಸಿದ್ದಪ್ಪ.—45 ಲಕ್ಷ ರೂಪಾಯಿ ಖರ್ಚಾಗುತ್ತದೆ. ಪರಿಶೀಲನೆಯಲ್ಲಿರುವಾಗಲೇ ಟೆಂಡರ್ ಕರೆದಿದ್ದೀರಿ, ಕಂಟ್ರಾಕ್ಟರ್ ಕೊಟ್ಟಿರುವ ಟೆಂಡರಿನಲ್ಲಿ ಎಷ್ಟು ಲಕ್ಷ ರೂಪಾಯಿಗಳನ್ನು ಉಳಿತಾಯ ಮಾಡುವುದಕ್ಕೆ ಸಾಧ್ಯ ಎಂಬುದನ್ನು ಪರಿಶೀಲನೆ ಮಾಡುವುದಕ್ಕೆ ಸಾಧ್ಯವೇ ?

ಶ್ರೀ ಎಸ್. ಆರ್. ಕಂಠಿ.—ಶ್ರೀಮಾನ್ ಕೆ. ಪಿ. ರೇವಣಸಿದ್ದಪ್ಪನವರು ಈ ಕಾಂಟ್ರಾಕ್ಟರ್‌ಗಳ ವಿಷಯದಲ್ಲಿ ಎಕ್ಸ್‌ಪರ್ಟ್ ಇದ್ದಾರೆ, ಅವರು ಈ ವಿಷಯಗಳನ್ನೆಲ್ಲಾ ಬರೆದುಕೊಟ್ಟರೆ ಅದನ್ನು ಗವರ್ನ್‌ಮೆಂಟ್ ಆಫ್ ಇಂಡಿಯಾದವರಿಗೆ ಕಳುಹಿಸುತ್ತೇನೆ. ಸನ್‌ಮಾನ್ಯ ಸದಸ್ಯರ ಅಭಿಪ್ರಾಯ ಹೀಗೆ ಇದೆ ಎಂದು ಹೇಳಿ ಅವರು ಏನಾದರೂ ಸೂಚನೆ ಮಾಡಿದರೆ ಅವಶ್ಯವಾಗಿ ಅದನ್ನು ಕಳುಹಿಸಿಕೊಡಬಹುದು.

ಅಧ್ಯಕ್ಷರು.—ಅವರನ್ನೇ ಕಳುಹಿಸುತ್ತೀರಾ ಅಥವಾ ಅವರ ಪತ್ರವನ್ನು ಕಳುಹಿಸುತ್ತೀರಾ ?

(ಸಭೆಯಲ್ಲಿ ನಗು ;)

ಶ್ರೀ ವಿ. ಎಂ. ದೇವ್.—ಶ್ರೀಮಾನ್ ಕೆ. ಪಿ. ರೇವಣಸಿದ್ದಪ್ಪನವರ ಸಲಹೆಯನ್ನು ಒಪ್ಪಿಕೊಂಡ ಹಾಗೆ ಆಯಿತು.

ಶ್ರೀ ಎಸ್. ಆರ್. ಕಂಠಿ.—ನಾವು ಒಪ್ಪಿಕೊಂಡು ಏನು ಪ್ರಯೋಜನ ? ಗವರ್ನ್‌ಮೆಂಟ್ ಆಫ್ ಇಂಡಿಯಾದವರು ಒಪ್ಪಿಕೊಳ್ಳಬೇಕು.

ಶ್ರೀ ಕೆ. ಲಕ್ಕಪ್ಪ.—ಪ್ರತಿಯೊಂದು ದರ್ಜೆಯ ಕಂಟ್ರಾಕ್ಟ್‌ದಾರರು ಎಷ್ಟು ಜನ ಇದ್ದಾರೆ ?

ಶ್ರೀ ಎಸ್. ಆರ್. ಕಂಠಿ.— 6 ಜನ.

Primary Schools in the State.

*Q.—536. **Sri G. MADE GOWDA** (Malavalli).—

Will the Government be pleased to state :—

(*a*) the total number of Primary Schools in the State ;

(*b*) out of them, the number of them that were upgraded in 1964 ;

(*c*) the number of Primary Schools which have their own buildings in the State ?

A.—Sri S. R. KANTHI (Minister for Eudcation).—

(*a*) 30,539.
(*b*) 180,
(*c*) 14,412.

ಶ್ರೀ ಜಿ. ಮಾದೇಗೌಡ.—1964ನೇ ಇಸವಿಯಲ್ಲಿ ಅಪ್‌ಗ್ರೇಡ್ ಆಗಿರತಕ್ಕೆ ಶಾಲೆಗಳು 180 ಎಂದು ಹೇಳಿದ್ದೀರಿ. 1964ನೇ ಇಸವಿಯವರೆಗೂ ಅಪ್ ಗ್ರೇಡ್ ಆಗಿರತಕ್ಕ ಶಾಲೆಗಳ ಸಂಖ್ಯೆ ಎಷ್ಟು?

† ಶ್ರೀ ಎಸ್. ಆರ್. ಕಂಠಿ.—ಅವರು ಕೇಳಿರುವ ಪ್ರಶ್ನೆ 1964ನೇ ಇಸವಿಯಲ್ಲಿ ಅಪ್ ಗ್ರೇಡ್ ಆಗಿರುವುದೆಷ್ಟು ಎಂದು ಕೇಳಿದ್ದಾರೆ, ಅದಕ್ಕೆ 180 ಎಂದು ಹೇಳಿದ್ದೇವೆ. ಅಲ್ಲಿಯವರೆಗೂ ಎಷ್ಟಾಗಿದೆ ಎಂದರೆ ಅದಕ್ಕೆ ನೋಟಿಸ್‌ಬೇಕು.

ಶ್ರೀ ಜಿ. ಮಾದೇಗೌಡ.—ಒಟ್ಟು 30,539 ಶಾಲೆಗಳು ಇವೆ ಎಂದು ಹೇಳಿದ್ದೀರಿ. ಈ ಶಾಲೆಗಳೆಲ್ಲವನ್ನೂ ಅಪ್‌ಗ್ರೇಡ್ ಮಾಡುವುದಕ್ಕೆ ಯೋಜನೆ ಮಾಡಿದ್ದೀರಾ ಅಥವಾ ಅಪ್ ಗ್ರೇಡ್ ಮಾಡುವುದಕ್ಕೆ ಎಷ್ಟು ಕಾಲ ಮತ್ತು ಹಣ ಬೇಕಾಗುತ್ತದೆ ಎಂಬ ಅಂದಾಜು ಇದೆಯೇ?

ಶ್ರೀ ಎಸ್. ಆರ್. ಕಂಠಿ.—ಅದು ಕಾಂಪ್ರಹೆನ್ಸೀವ್ ಪ್ರಶ್ನೆ, ಅದಕ್ಕೆ ಈಗ ಉತ್ತರ ಹೇಳುವುದಕ್ಕಾಗುವುದಿಲ್ಲ. ಯಾವ ಯಾವುದನ್ನು ಅಪ್ ಗ್ರೇಡ್ ಮಾಡಬೇಕಾದ ಅವಶ್ಯಕತೆ ಇತ್ತೋ ಅವನ್ನೆಲ್ಲಾ ಮಾಡಿದ್ದಾರೆ ಮತ್ತು ಮಾಡುತ್ತಾ ಇದ್ದಾರೆ. ಅಪ್ ಗ್ರೇಡ್ ಮಾಡುವುದೂ ಸಹ ನಾಲ್ಕರಿಂದ ಐದು ಐದರಿಂದ ಆರು, ಆರರಿಂದ ಏಳು ಈ ಪ್ರಕಾರ ಮಾಡುತ್ತಾ ಹೋಗುತ್ತೇವೆ.

Sri SANJEEVANATH AIKALA.—What are the conditions stipulated to upgrade such primary schools?

ಶ್ರೀ ಎಸ್. ಆರ್, ಕಂಠಿ.—ನಾಲ್ಕನೇ ಕ್ಲಾಸ್ ಇಂದ ಐದನೇ ಕ್ಲಾಸ್‌ಗೆ ಹೋಗಬೇಕಾದರೆ ಕನಿಷ್ಠ 25 ಹುಡುಗರು ಇರಬೇಕೆಂದು ಇದೆ.

ಶ್ರೀ ಬಿ. ಚನ್ನಬ್ಯೈರೇಗೌಡ.—14,412 ಶಾಲೆಗಳಿಗೆ ಸ್ವಂತ ಕಟ್ಟಡಗಳಿವೆ ಎಂದು ಹೇಳಿದ್ದೀರಿ, ಇವುಗಳು ಉತ್ತಮ ಸ್ಥಿತಿಯಲ್ಲಿ ಇವೆಯೇ, ಅಲ್ಲಿ ಕ್ಲಾಸ್‌ಗಳನ್ನು ನಡೆಸುವುದಕ್ಕೆ ಸಾಧ್ಯವೇ ಎಂಬುದನ್ನು ಪರಿಶೀಲನೆ ಮಾಡಿದ್ದೀರಾ? ಅಥವಾ ಅವುಗಳೆಲ್ಲವೂ ಒಳ್ಳೆಯ ಸ್ಥಿತಿಯಲ್ಲಿ ಇವೆಯೇ?

ಶ್ರೀ ಎಸ್. ಆರ್. ಕಂಠಿ.—ಅದು ಬಹಳ ದೊಡ್ಡ ಪ್ರಶ್ನೆ ಆಯಿತು, ಪ್ರತ್ಯೇಕ ಪ್ರಶ್ನೆ ಕೇಳಿದರೆ ಹೇಳುತ್ತೇನೆ.

Sri S. SIVAPPA.—According to the answers supplied here, out of 30,530 schools, only 14,400 have their own buildings. That means 60 per cent of the schools have no buildings of their own. May I know whether these schools are running without buildings?

ಶ್ರೀ ಎಸ್. ಆರ್. ಕಂಠಿ.—ಕೆಲವು ಶಾಲೆಗಳು ಬಾಡಿಗೆ ಮನೆಯಲ್ಲಿ, ಕೆಲವು ದೇವಸ್ಥಾನಗಳಲ್ಲಿ ಕೆಲವು ಚಾವಡಿಗಳಲ್ಲಿ ನಡೆಯುತ್ತಾ ಇವೆ.

ಶ್ರೀ ಜಿ. ಮಾದೇಗೌಡ.—ಸುಮಾರು ಅರ್ಧಕ್ಕಿಂತ ಹೆಚ್ಚು ಶಾಲೆಗಳಿಗೆ ಕಟ್ಟಡಗಳಿಲ್ಲ ಎಂದು ತಾವು ಹಿಂದೆ ಹೇಳಿದ್ದೀರಿ. ದೇಶದಲ್ಲಿರತಕ್ಕ ಎಲ್ಲಾ ಪ್ರೈಮರಿ ಸ್ಕೂಲುಗಳಿಗೂ ಕಟ್ಟಡಗಳನ್ನು ಒದಗಿಸುವುದಕ್ಕೆ ಎಷ್ಟು ಹಣ ಖರ್ಚಾಗುತ್ತದೆ ಮತ್ತು ಎಷ್ಟು ಕಾಲಾವಧಿ ಬೇಕಾಗುತ್ತದೆ ಎಂಬ ಒಂದು ಅಂದಾಜು ಇದೆಯೇ? ಅಥವಾ ಅಂದಾಜು ಮಾಡುವುದಕ್ಕೆ ಸಾಧ್ಯವಾಗುತ್ತದೆಯೇ?

ಶ್ರೀ ಎಸ್. ಆರ್. ಕಂಠಿ.—ಆ ವಿಷಯವನ್ನು ಎಷ್ಟೋ ಸಲ ಹೇಳಿದ್ದೇನೆ. ಅದಕ್ಕೆ ಸುಮಾರು 30 ಕೋಟಿ ರೂಪಾಯಿ ಬೇಕಾಗುತ್ತದೆ.

ಶ್ರೀ ಟಿ. ಮಾದಯ್ಯಗೌಡ.—ಖಾನಗಿಯವರ ಜಗಲಿಗಳ ಮೇಲೆ, ದೇವಸ್ಥಾನಗಳಲ್ಲಿ, ಚಾವಡಿಗಳಲ್ಲಿ ಶಾಲೆಗಳನ್ನು ನಡೆಸುತ್ತಾ ಇರುವುದರಿಂದ ಪ್ರಾಥಮಿಕ ವಿದ್ಯಾಭ್ಯಾಸ ಬಹುಮಟ್ಟಿಗೆ ಕುಂಠಿತ ವಾಗಿದೆ ಎಂಬುದನ್ನು ಸರ್ಕಾರದವರು ಗಮನಿಸಿದ್ದಾರೆಯೇ?

ಶ್ರೀ ಎಸ್. ಆರ್. ಕಂಠಿ.—ಎಲ್ಲರಿಗೂ ಅಕಾಮೊಡೇಟ್ ಮಾಡಿಕೊಡಬೇಕೆಂಬ ಪ್ರಶ್ನೆ ಬಹಳ ದೊಡ್ಡ ಪ್ರಶ್ನೆ. ಸರ್ಕಾರದವರು ಒಂದು ಸ್ಕೂಲಿಗೆ ಒಂದು ಸಾವಿರರೂಪಾಯಿ ಕೊಡುವುದಕ್ಕೆ ಒಪ್ಪಿಕೊಂಡಿದ್ದಾರೆ. ಅದಕ್ಕೆ ಮರ ಕೊಡಬೇಕೆಂದು ಮಾಡಿದ್ದಾರೆ. ತಾಲ್ಲೂಕು ಡೆವಲಪ್‌ಮೆಂಟ್ ಬೋರ್ಡ್‌ನವರು ಆಸ್ತಿ ವಹಿಸಿ ನನ್ನೆ ದಿವಸ ಹೇಳಿದ ಪ್ರಕಾರ ಮೂರು ವರ್ಷದಲ್ಲಿ 4,000 ರೂಮುಗಳನ್ನು ಕಟ್ಟಿಸಿಕೊಟ್ಟಿದ್ದಾರೆ. ಅವರು ಮತ್ತು ನಾವು ಜನಗಳ ಜೊತೆಯಲ್ಲಿ ಸೇರಿ ಕೆಲಸ ಮಾಡಿದರೆ ನಿಧಾನವಾಗಿ ಆದರೂ ಈ ಪ್ರಶ್ನೆಯನ್ನು ಬಿಡಿಸಲಕ್ಕೆ ಅವಕಾಶ ಇದೆ ಎಂದು ಹೇಳುತ್ತೇನೆ.

Sri S. RAJAGOPAL.—In answer to (*c*), you have stated that there are 14,412 primary schools which have their own buildings. Is it possible for you to give districtwise break-up figures ?

Sri S. R. KANTHI.—If the Hon'ble Member asks a separate question I will be able to answer.

ಶ್ರೀ ಡಿ. ಎಂ. ಸಿದ್ದಯ್ಯ.—ತಾವು ಹೇಳುವ ಪ್ರಕಾರ ಒಂದು ಸಾವಿರ ರೂಪಾಯಿಗಳನ್ನು ಒಂದು ಕಟ್ಟಡಕ್ಕೆ ಕೊಡುತ್ತೀರಿ, ಇನ್ನು ಎರಡೂವರೆ ಸಾವಿರರೂಪಾಯಿಗಳನ್ನು ಒದಗಿಸುವುದಕ್ಕೆ ಜನ ಗಳಿಗೆ ತೊಂದರೆಯಾಗುವುದರಿಂದ ಹಳ್ಳಿಯ ಸಾಮಾನುಗಳನ್ನೇ ಉಪಯೋಗಿಸಿಕೊಂಡು ಅವರಿಗೆ ಯಾವ ರೀತಿಯಲ್ಲಿ ಬೇಕೋ ಆ ರೀತಿಯಲ್ಲಿ ಕಟ್ಟಿಕೊಳ್ಳುವುದಕ್ಕೆ ಅವಕಾಶ ಮಾಡಿಕೊಡುತ್ತೀರಾ ?

ಶ್ರೀ ಎಸ್. ಆರ್. ಕಂಠಿ.—ಆ ಸೂಚನೆ ಸರ್ಕಾರದ ಮುಂದೆ ಇದೆ. ಪ್ಲಿನ್ತ್ ಏರಿಯಾ ಎಷ್ಟಿರ ಬೇಕೆಂಬುದನ್ನು ನೋಡುತ್ತಾ ಇದ್ದೇವೆ.

ಶ್ರೀ ಬಿ. ಭಾಸ್ಕರಶೆಟ್ಟಿ.—ಈಗ ಹಳೇ ಮೈಸೂರಿನಲ್ಲಿ ಅನೇಕ ಕಡೆ ಗೋವಿನ ಕಚ್ಚೆಯಲ್ಲಿ ಶಾಲೆಯನ್ನು ನಡೆಸುತ್ತಾ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಎಸ್. ಆರ್. ಕಂಠಿ.—ಅದು ಬಹಳ ಉತ್ಪ್ರೇಕ್ಷೆಯ ಮಾತು ಆದರೆ ಈಗ ಕೆಲವು ಶಾಲೆಗಳು ಗುಡಿಸಲುಗಳಲ್ಲಿ ನಡೆಯುತ್ತಾ ಇವೆ.

9-00 A.M.

ಶ್ರೀ ಸಿ. ಆರ್. ರಂಗೆಗೌಡ.—ಈ 14,412 ಶಾಲಾ ಕಟ್ಟಡಗಳನ್ನು ರಿಪೇರಿ ಮಾಡಬೇಕೆಂದು ತಾಲ್ಲೂಕು ಬೋರ್ಡಿನವರನ್ನು ಮತ್ತು ಪಿ.ಡಬ್ಲ್ಯು. ನವರನ್ನು ಕೇಳಿದರೆ ಅವರು ತಮಗೆ ಸೇರಿಲ್ಲವೆಂದು ಹೇಳುತ್ತಾರೆ. ಇವನ್ನು ಮೈನ್‌ಟೈನ್ ಮಾಡುವವರು ಯಾರು ?

ಶ್ರೀ ಎಸ್. ಆರ್. ಕಂಠಿ.—ತಾಲ್ಲೂಕು ಬೋರ್ಡಿಗೆ ಯಾವ ಶಾಲೆಗಳು ಸೇರಿವೆ ಎಂದು ಈಗ ಪಟ್ಟಿ ಮಾಡಿದೆ. ಅದುದರಿಂದ ತಮಗೆ ಸೇರಿಲ್ಲವೆಂದು ಹೇಳುವುದಕ್ಕಾಗುವುದಿಲ್ಲ. ಆದರೆ ಹಣವಿಲ್ಲ ವೆಂದು ಹೇಳಬಹುದು.

ಶ್ರೀ ಎಚ್. ಡಿ. ದೇವೇಗೌಡ.—ಶಾಲೆಗಳನ್ನು ಅಪ್‌ಗ್ರೇಡ್ ಮಾಡುವುದಕ್ಕೆ ಕೆಲವು ನಿಬಂಧನೆ ಗಳಿವೆ, 25 ಮಕ್ಕಳಿಗಿಂತ ಹೆಚ್ಚು ಹುಡುಗರು ಬರುವುದಾದರೆ ಮಾಡಲಾಗುವುದು ಎಂದು ಹೇಳಿದರು. ಕೆಲವು ಶಾಲೆಗಳಲ್ಲಿ 25 ಹುಡುಗರು ಬರುವುದಿಲ್ಲ. ಅಂಥ ಸಂದರ್ಭಗಳಲ್ಲಿ ಹತ್ತಿರವಿರುವ ಶಾಲೆ ಗಳನ್ನು ಸೇರಿಸಿ 25ಕ್ಕಿಂತ ಹೆಚ್ಚು ಸಂಖ್ಯೆಯಾದರೆ ಅಪ್ ಗ್ರೇಡ್ ಮಾಡುತ್ತೀರಾ ?

ಶ್ರೀ ಎಸ್. ಆರ್. ಕಂಠಿ.—ಅದು ಮಾನ್ಯ ಸದಸ್ಯರ ಸಲಹೆ, ಸಾಧ್ಯವಾದರೆ ಯೋಚನೆ ಮಾಡ ಬಹುದು.

ಶ್ರೀ ಜಿ. ರಾಮೇಗೌಡ.—ಈ ವರ್ಷ ಶಾಲಾ ಕಟ್ಟಡಗಳಿಗಾಗಿ ಮರದ ಸಾಮಾನುಗಳನ್ನು ಕೊಡುತ್ತೇವೆಂದು ಹೇಳುವುದು ತ್ಯಾಗದಮರದ ಸಾಮಾನೋ ಅಥವಾ ಕಾಡುಮರದ ಸಾಮಾನೋ?

ಶ್ರೀ ಎಸ್. ಆರ್. ಕಂಠಿ.—ಮರ ಕೊಡುವುದಕ್ಕೆ ಮುಂಚೆಯೇ ತೇಗದಮರದ್ದೇ ಎಂದು ಕೇಳಿದರೆ ಹೇಗೆ ! ಮತ್ತೆ, ಹೊನ್ನೆ ಮುಂತಾದ್ದಿದೆ, ಅದನ್ನು ಕೊಡಲಾಗುವುದು.

Sri SANJEEVANATH AIKALA.—Who is to make arrangement to provide buildings for the single-teacher schools started by the Central Government or sponsored by the Central Government !

Sri S. R. KANTHI.—There are very few. Few and very far between.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಗ್ರಾಮಪಂಚಾಯಿತಿ ತನ್ನ ಹಣದಿಂದ ಕಟ್ಟಡ ಕಟ್ಟಲು ನಿರ್ಬಂಧವಿದೆ. ಅದನ್ನು ನಡಿಲಮಾಡಿ ಶಾಲಾ ಕಟ್ಟಡ, ಅದು ಕಟ್ಟಲು ಅವಕಾಶ ಮಾಡುತ್ತೀರಾ ?

ಶ್ರೀ ಎಸ್. ಆರ್. ಕಂಠಿ.—ಅದು ಸರಕಾರದ ಯೋಚನೆಯಲ್ಲಿದೆ

ಶ್ರೀ ಬಿ. ಬೈರಪ್ಪಾಜಿ.—ಸರಕಾರ ಪಾಠಶಾಲೆ ಮಂಜೂರು ಮಾಡುವಾಗ ಕಟ್ಟಡವಿದೆಯೇ ಇಲ್ಲವೇ ಎಂದು ಗಮನಿಸಿ, ಇಲ್ಲವಿದ್ದರೆ ಅದನ್ನು ಕಟ್ಟಿಸುವ ಜವಾಬ್ದಾರಿಯನ್ನು ನಿರ್ಧರಿಸಿ ಶಾಲೆ ಮಂಜೂರುಮಾಡುವುದು ಸರಕಾರದ ನೀತಿಯಲ್ಲವೇ !

ಶ್ರೀ ಎಸ್. ಆರ್. ಕಂಠಿ.—ಯಾರಿಗಾದರೂ ಶಾಲೆ ಕೊಡಬೇಕಾದರೆ ಊರಿನವರು ಮುಂದೆ ಬಂದು ದೇವಸ್ಥಾನ, ಚಾವಡಿ ಅಥವಾ ಬೇರೆ ಜಾಗವಿದೆ, ಅಲ್ಲಿ ನಡೆಸಬಹುದು ಎಂದು ಹೇಳಿಕೊಡಬೇಕೆಂದು ಕೇಳುತ್ತಾರೆ.

ಶ್ರೀ ಎಸ್. ಶಿವಪ್ಪ.—ಈಗ ಸರಕಾರ ಹೇಳುವ ರೀತಿ ಶಾಲಾಕಟ್ಟಡ ಒದಗಿಸುವ ರೀತಿ ನೋಡಿದರೆ ಇನ್ನು 30-40 ವರ್ಷಗಳಾದರೂ ಕೂಡ ಒದಗಿಸುವ ಸ್ಥಿತಿ ಇಲ್ಲದಿರುವುದರಿಂದ ಸರಕಾರ ಒಂದು ಕಡ್ಡಾಯವಾಗಿ ಕಟ್ಟಡ ಒದಗಿಸುವ ಪ್ಲಾನ್ಡ್ ಮತ್ತು ಫೇಸ್ಡ್ ಪ್ರೋಗ್ರಾಂ ಹಾಕಿ ವರ್ಷಕ್ಕಿಷ್ಟು ಎಂದು ಕಟ್ಟುವ ಯೋಚನೆ ಇದೆಯೇ ?

ಶ್ರೀ ಎಸ್. ಆರ್. ಕಂಠಿ.—ಈ ವಿಚಾರದಲ್ಲಿ ನಿರ್ಧಾರವಾಗಿ ಹೇಳುವುದಕ್ಕಾಗುವುದಿಲ್ಲ. ಈ ವರ್ಷ ಕಡಮೆ ಇದ್ದರೂ ಮುಂದೆ ಜಾಸ್ತಿಯಾಗುವುದು. ಈಗ ಶಾಲೆಗಳಿಗೆ ಬೇಡಿಕೆ ಜಾಸ್ತಿ ಇದೆ. ಆದ್ದರಿಂದ ನಿರ್ದಿಷ್ಟವಾಗಿ ಇಷ್ಟೇ ಕಟ್ಟಡ ಕಟ್ಟಿಸಬೇಕೆಂದು ಹೇಳುವುದಕ್ಕೆ ಬರುವುದಿಲ್ಲ. ಆದರೆ ಈಗ ಹೆಚ್ಚಿನ ರೀತಿಯಿಂದ ಕಟ್ಟಿಸಬೇಕೆಂದು ತಾಲ್ಲೂಕುಬೋರ್ಡಿನವರು ಯೋಚನೆಮಾಡುತ್ತಿದ್ದಾರೆ. ಸರಕಾರ ಮರ ಕೊಡುವುದೂ ಇದೆ. ಇದರಿಂದ ಕಟ್ಟಡಗಳ ಸಂಖ್ಯೆ ಬೆಳೆಯಲಿದೆ.

ಶ್ರೀ ಕೆ. ಲಕ್ಕಪ್ಪ.—ಕಾಂಗ್ರೆಸ್ ಸರಕಾರ ಬಂದಮೇಲೆ ಪ್ರಾಥಮಿಕ ಶಾಲೆ ಕಟ್ಟಡವಿಲ್ಲದೆ ನಡೆಯಬೇಕಾದ ಪರಿಸ್ಥಿತಿ ಬಂದಿರುವುದರಿಂದ ರಾಮರಾಜ್ಯ ಸ್ಥಾಪಿಸಬೇಕೆಂದಿದ್ದ ಅದರ ನೀತಿ ವಿಫಲವಾಗಿಲ್ಲವೇ ?

ಶ್ರೀ ಎಸ್. ಆರ್. ಕಂಠಿ.—ಅವರ ಸರಕಾರ ಬಂದಮೇಲೆ ಎಲ್ಲಾ ಸರಿಹೋಗಬಹುದು.

Shifting of the Central Jail Building at Gulbarga.

**Q.*—568. Sri MAHANTASWAMY (Shahpur).—

Will the Government be pleased to state :—

(*a*) when the Central Jail building at Gulbarga was constructed ;

(*b*) the annual income and expenditure of the said Jail ;

(*c*) whether they intend to shift Jail from Gulbarga to some other place ;

(*d*) if so, the reasons therefor ;

(*e*) for what purpose the present building would be utilised after the Jail is shifted ?

A.—Sri R. M. PATIL (Minister for Home).—

(*a*) In the year 1895.

(*b*) *Year*		*Total expenditure*	*Total income*
		Rs.	*Rs.*
1961	...	6,20,599	92,010
1962	...	4,81,088	1,14,403
1963	...	4,64,621	1,79,770

(*c*) Yes.

(*d*) and (*e*) The reasons therefor and the purpose, the present building will be utilised are enumerated in detail in Government Order No. PWD 78 BMD 64, dated 27th July, 1964 which is placed on the Table of the House. *Copy placed in the Mysore Legislatures Library *Vide* No. 13.

ಶ್ರೀ ಮಹಂತಸ್ವಾಮಿ.—ಉತ್ತರದಲ್ಲಿ ಗುಲ್ಬರ್ಗಾದಲ್ಲಿರುವ ಕೇಂದ್ರ ಬಂದೀ ಖಾನೆಯನ್ನು ಸ್ಥಳಾಂತರಿಸುವ ಉದ್ದೇಶವಿದೆಯೆಂದು ಹೇಳಿದೆ. ಆ ಉದ್ದೇಶವೇನೆಂಬುದನ್ನು ತಿಳಿಸಲು ಸಾಧ್ಯವೆ?